**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಡಾ: ವೈ.ಎ. ನಾರಾಯಣಸ್ವಾಮಿ ರವರು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಮಹತ್ವಾಕಾಂಕ್ಷಿ ಕುಡಿಯುವ ನೀರಿನ ಯೋಜನೆಯಾದ ಎತ್ತಿನಹೊಳೆ ಯೋಜನೆ ಪ್ರಾರಂಭವಾಗಿ 8 ವರ್ಷಗಳು ಕಳೆದರೂ, ಈ ಯೋಜನೆಗಾಗಿ ಪರಿಷ್ಕೃತ ಯೋಜನಾ ಅಂದಾಜು ಪಟ್ಟಿಯನ್ನು ತಯಾರಿಸಿ ಅನುಮೋದನೆ ನೀಡಿ ಸಾವಿರಾರು ಕೋಟಿ ಹಣ ಬಿಡುಗಡೆ ಮಾಡಿದ್ದರೂ, ಇದೂವರೆವಿಗೂ ಶೇ.40ರಷ್ಟು ಪ್ರಗತಿಯನ್ನು ಕಾಣದೇ ಇರುವುದರಿಂದ ಹಾಗೂ ಈ ಯೋಜನೆಗೆ ಸಂಬಂಧಿಸಿದ ಭೂಸ್ವಾಧೀನ ಪ್ರಕ್ರಿಯೆಗಳು ಇನ್ನೂ ಪೂರ್ಣಗೊಳ್ಳದೇ ಇರುವುದರಿಂದ, ಈ ಯೋಜನಾ ವ್ಯಾಪ್ತಿಯಲ್ಲಿ ಬರುವ ನೀರು ಶೇಖರಣಾ ಜಲಾಶಯಗಳ ಕಾಮಗಾರಿಗಳು ಇನ್ನೂ ಪ್ರಾರಂಭ ಆಗದೇ ಇರುವುದರಿಂದ ಈ ಯೋಜನೆ ಅನುಷ್ಠಾನದ ಬಗ್ಗೆ ಹಾಗೂ ಪೂರ್ಣಗೊಳ್ಳುವುದರಲ್ಲಿ, ಆ ಭಾಗದ ಜನರಲ್ಲಿ ಆತಂಕ ಮತ್ತು ಗೊಂದಲ ಸೃಷ್ಠಿ ಮಾಡಿರುವ ವಿಚಾರದ ಬಗ್ಗೆ ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಉಪ ಮುಖ್ಯಮಂತ್ರಿರವರ ಉತ್ತರ.**

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ರೂ.23,251.66 ಕೋಟಿ ಮೊತ್ತದ ಪುನರ್ ಪರಿಷ್ಕೃತ ಯೋಜನಾ ವರದಿಗೆ ದಿನಾಂಕ:10.01.2023 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಯೋಜನೆಯ ಕಾಮಗಾರಿಗಳನ್ನು ಎರಡು ಹಂತಗಳಲ್ಲಿ 2013-14 ನೇ ಸಾಲಿನಿಂದ ಹಂತ ಹಂತವಾಗಿ ಕೈಗೆತ್ತಿಕೊಳ್ಳಲಾಗುತ್ತಿದೆ. ವಿವರಗಳು ಈ ಕೆಳಕಂಡಂತಿವೆ;

- ಹಂತ-1 ರಲ್ಲಿನ ಏತ (lift) ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದ್ದು, ಈ ಪೈಕಿ ಪ್ರಸ್ತುತ ವಿಯರ್-1, 4 & 5 ರಿಂದ ನೀರನ್ನೆತ್ತಿ ಪ್ರಾಯೋಗಿಕವಾಗಿ ಚಾಲನೆಗೊಳಿಸಲು ಕ್ರಮ ವಹಿಸಲಾಗಿದೆ. 31.03.2024 ರ ಅಂತ್ಯಕ್ಕೆ ಎಲ್ಲಾ ಲಿಫ್ಟ್ ಕಾಮಗಾರಿಗಳನ್ನು ಪೂರ್ಣಗೊಳಿಸಿ ಜೂನ್-2024 ರ ವೇಳೆಗೆ ಎಲ್ಲಾ 8 ವಿಯರ್‌ಗಳಿಂದ ನೀರನ್ನೆತ್ತಿ ಗುರುತ್ವ ಕಾಲುವೆಯ ಸರಪಳಿ:42.00ಕಿ.ಮೀ.ವರೆಗೆ ಹರಿಸಲು ಉದ್ದೇಶಿಸಲಾಗಿದೆ.

- ಹಂತ-2ರಲ್ಲಿ ಗುರುತ್ವ ಕಾಲುವೆ (Gravity main canal) ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು, ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

- ಸಮತೋಲನಾ ಜಲಾಶಯಕ್ಕಿಂತ (Balancing Reservoir) ಮೊದಲು ಕವಲೊಡೆಯುವ ಮಧುಗಿರಿ ಫೀಡರ್, ಟಿ.ಜಿ.ಹಳ್ಳಿ- ರಾಮನಗರ ಫೀಡರ್ ಹಾಗೂ ಗೌರಿಬಿದನೂರು ಫೀಡರ್ ಪೈಪ್‌ಲೈನ್ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ.

- ಪ್ರಸ್ತುತ ಪುನರ್ ಪರಿಷ್ಕೃತ ಯೋಜನಾ ವರದಿಯಂತೆ ಕಾಮಗಾರಿಯ ಬದಲಾದ ಸ್ವರೂಪಕ್ಕನುಗುಣವಾಗಿ ಲಕ್ಕೇನಹಳ್ಳಿ ಬಳಿ ಸಮತೋಲನಾ ಜಲಾಶಯ (Balancing Reservoir) ನಿರ್ಮಾಣ ಕಾಮಗಾರಿಯನ್ನು ನಿಗಮದ ನಿರ್ದೇಶಕರ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು ಗುತ್ತಿಗೆದಾರರಿಗೆ ಕರಾರು ವಹಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಪ್ರ-330
ಶಿವಕು-54
15/12/23

- ಸಮತೋಲನಾ ಜಲಾಶಯದ (Balancing Reservoir) ನಂತರದಲ್ಲಿ ಬರುವ ಲಿಫ್ಟ್ ಕಾಮಗಾರಿ ಮತ್ತು ಸ:22.30 ಕಿ.ಮೀ ವರೆಗಿನ ಗುರುತ್ವ ಪೈಪ್‌ಲೈನ್ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಸ:22.30 ಕಿ.ಮೀ ನಿಂದ ಸ:36.965 ಕಿ.ಮೀ ವರೆಗಿನ ಗುರುತ್ವ ಪೈಪ್‌ಲೈನ್ ಕಾಮಗಾರಿಗಳು ಕೋಲಾರ ಹಾಗೂ ಶ್ರೀನಿವಾಸಪುರ ಫೀಡರ್ ಪೈಪ್‌ಲೈನ್ ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ವಹಿಸಲಾಗಿದ್ದು, ಕಾಮಗಾರಿಯನ್ನು ಪ್ರಾರಂಭಿಸಬೇಕಿರುತ್ತದೆ.

- ಎತ್ತಿನಹೊಳೆ ಯೋಜನೆಯ ಅನುಷ್ಠಾನಕ್ಕಾಗಿ ಒಟ್ಟು 9141 ಎಕರೆ-26 ಗುಂಟೆ ಜಮೀನಿನ ಅವಶ್ಯಕತೆ ಇದ್ದು ಈಗಾಗಲೇ 5454 ಎಕರೆ-15 ಗುಂಟೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದ್ದು, ಬಾಕಿ 3687 ಎಕರೆ-11 ಗುಂಟೆ ಜಮೀನಿನ ಭೂಸ್ವಾಧೀನ ಪ್ರಕ್ರಿಯೆ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ.

- ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು, ರಾಷ್ಟ್ರೀಯ ಹಸಿರು ನ್ಯಾಯ ಪೀಠದಲ್ಲಿ (NGT) ದಾಖಲಾಗಿದ್ದ ಪ್ರಕರಣಗಳನ್ನು ಇತ್ಯರ್ಥಗೊಳಿಸುವಲ್ಲಿ ಆಗಿರುವ ವಿಳಂಬ, ಭೂಸ್ವಾಧೀನ ಪ್ರಕ್ರಿಯೆ ಹಾಗೂ ರೈತರಿಂದ ಜಮೀನುಗಳನ್ನು ಪಡೆಯುವಲ್ಲಿ ಉಂಟಾಗಿರುವ ವಿಳಂಬ, ಕಂದಾಯ, ಅರಣ್ಯ ಹಾಗೂ ರಾಷ್ಟ್ರೀಯ ಹೆದ್ದಾರಿ, ರೈಲ್ವೆ, ಪೆಟ್ರೋನೆಟ್ ಮತ್ತು ಗೇಲ್ ಗ್ಯಾಸ್ ಪೈಪ್ ಲೈನ್ ಕ್ರಾಸಿಂಗ್‌ಗಳಿಗೆ ಸಂಬಂಧಿಸಿದ ಅನುಮತಿ ದೊರೆಯುವಲ್ಲಿ ಉಂಟಾಗಿರುವ ವಿಳಂಬ, ಬೈರಗೊಂಡ್ಲು ಜಲಾಶಯಕ್ಕೆ ಸಂಬಂಧಿಸಿದಂತೆ ರೈತರುಗಳು ಏಕ ರೂಪದರ ನೀಡಲು ಒತ್ತಾಯಿಸಿದ್ದರಿಂದ ಭೂಮಿ ವಶಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಾರಂಭಿಸುವಲ್ಲಿನ ವಿಳಂಬಗಳಿಂದಾಗಿ ಯೋಜನೆಯು ವಿಳಂಬವಾಗಿರುತ್ತದೆ.

- ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗೆ 2023-24ನೇ ಸಾಲಿನಲ್ಲಿ ರೂ.1249.00 ಕೋಟಿಗಳ ಅನುದಾನ ಹಂಚಿಕೆ ಮಾಡಲಾಗಿದ್ದು, ನವೆಂಬರ್-2023 ರ ಅಂತ್ಯದವರೆಗೆ ರೂ.848.61 ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ನವೆಂಬರ್- 2023 ರ ಅಂತ್ಯದವರೆಗೆ ಒಟ್ಟಾರೆಯಾಗಿ ಸಂಚಿತ ರೂ.14,702.86 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

- ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು ದಿ:31.03.2027 ರ ಅಂತ್ಯಕ್ಕೆ ಅನುದಾನದ ಲಭ್ಯತೆ ಮೇರೆಗೆ ಸಂಪೂರ್ಣವಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

**ಸಂಖ್ಯೆ: ಜಸಂಇ 74 ಡಬ್ಲ್ಯೂಎಲ್‌ಎ 2023**

**(ಡಿ.ಕೆ.ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**